ಕರ್ನಾಟಕ ವಿಧಾನ ಸಭೆ

101 ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ) ರಾಜ್ಯದ ಬರಪೀಡಿತ ಮತ್ತು ಅತ್ಯಂತ ಹಿಂದುಳಿದ ಜಿಲ್ಲೆಗಳನ್ನು ಹೊಂದಿರುವ ಉತ್ತರ ಕರ್ನಾಟಕ ಭಾಗದಿಂದ ಉದ್ಯೋಗವನ್ನರಿಸಿ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿರುವ ಕುಟುಂಬಗಳ ಮಹಿಳೆಯರ ಹಾಗೂ ಮಕ್ಕಳ ಶಿಕ್ಷಣ ಮತ್ತು ಆರೋಗ್ಯ ರಕ್ಷಣೆ ವಿಷಯದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ "ಶಾಲೆಯಿಂದ ಹೊರಗುಳಿದ ಮಕ್ಕಳ ಮಧ್ಯವರ್ತನೆಯಡಿಯಲ್ಲಿ" (Out Of School Children) ವಲಸೆ ಹೋಗುತ್ತಿರುವ ಪೋಷಕರ ಮಕ್ಕಳ ಶಾಲಾ ತೊರೆಯುವಿಕೆಯನ್ನು ತಪ್ಪಿಸಲು 6 ತಿಂಗಳ ಋತುಮಾನ ಸೇತುಬಂಧ ಕೇಂದ್ರಗಳನ್ನು (Seasonal Residential Bridge Course) ನಡೆಸಲಾಗುತ್ತಿದೆ ಹಾಗೂ ಇಂತಹ ಮಕ್ಕಳನ್ನು ಆಶಾಕಿರಣ ಕೇಂದ್ರಗಳಿಗೆ ಸಹ ದಾಖಲು ಮಾಡಲಾಗುತ್ತಿದೆ.

ಈ ಕೇಂದ್ರಗಳನ್ನು ಅಗತ್ಯವಿದ್ದಾಗ ತೆರೆಯಲಾಗುತ್ತಿದೆ.

ಈ ಮಕ್ಕಳು ಮುಖ್ಯವಾಹಿನಿಯಲ್ಲಿ ಇರುವುದರಿಂದ ಈಗಾಗಲೇ ಶಾಲೆಯಲ್ಲೆ ಇವರ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ. ಇದರೊಂದಿಗೆ ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟವನ್ನು ಒದಗಿಸಲಾಗುತ್ತಿದೆ. ಮಧ್ಯಾಹ್ನ ಬಿಸಿ ಊಟದ ಜೊತೆಗೆ ಮಕ್ಕಳಲ್ಲಿ ಪೌಷ್ಟಿಕತೆಯನ್ನು ಹೆಚ್ಚಿಸಲು ಮೂರು ತೆರನಾದ ಮಾತ್ರೆಗಳನ್ನು ಒದಗಿಸಲಾಗುತ್ತದೆ. ತರಗತಿ 1ರಿಂದ 10ರ ವರೆಗಿನ ಮಕ್ಕಳಿಗೆ ವಾರ್ಷಿಕ ಆರೋಗ್ಯ ತಪಾಸಣಾ ಕಾರ್ಯವನ್ನು **ಸುವರ್ಣ ಆರೋಗ್ಯ ಚೈತನ್ಯ** ಕಾರ್ಯಕ್ರಮದಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಸಹಯೋಗದೊಂದಿಗೆ 2006–07ನೇ ಸಾಲಿನಿಂದ ಹಮ್ಮಿಕೊಳ್ಳಲಾಗಿದೆ.

ಆ) ಹೆಚ್ಚುತ್ತಿರುವ ಬಡತನದಿಂದಾಗಿ ವಲಸೆ ಹೋಗುತ್ತಿರುವ ಕುಟುಂಬದ ಮಕ್ಕಳ ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಯಿಂದ ವಂಚಿತರಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ;

ಹೌದು.

ಇ) ಹಾಗಿದ್ದಲ್ಲಿ, ಈ ಬಗ್ಗೆ ಪರಿಣಾಮಕಾರಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದೇ;

ಈಗಾಗಲೇ ಹಮ್ಮಿಕೊಂಡು ಮುಂದುವರಿಸಲಾಗುತ್ತಿದೆ.

ಈ) ವಲಸೆ ಕುಟುಂಬಗಳು ಅವರ ಮಕ್ಕಳಿಗೆ ಶಿಕ್ಷಣವನ್ನು ಕೊಡಲು ಹಿಂಜರಿಯುತ್ತಿದ್ದ ಹಿನ್ನೆಲೆಯಲ್ಲಿ ಅವರಿಗೆ ಶೈಕ್ಷಣಿಕೆ ಅರಿವು ಮತ್ತು ಸೌಲಭ್ಯಗಳನ್ನು ನೀಡಿ ಮಕ್ಕಳ ಶಿಕ್ಷಣ ಮುಂದುವರಿಸಲು ಅನುಕೂಲ ಕಲ್ಪಿಸಿ ಕೊಡಲಾಗುವುದೇ?

ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಋತುಮಾನ ಸೇತುಬಂಧ ಕೇಂದ್ರಗಳ ಜೊತೆಯಲ್ಲಿ ವಲಸೆ ಕುಟುಂಬದ ಮಕ್ಕಳನ್ನು ಆಶಾಕಿರಣ ಕೇಂದ್ರಗಳಿಗೂ ಸಹ ದಾಖಲಿಸಲು ಕ್ರಮ ವಹಿಸಲಾಗಿದೆ. ಜೊತೆಗೆ ವಲಸೆ ಬಂದಿರುವ ಶಾಲಾ ವಯಸ್ಸಿನ ಮಕ್ಕಳಿಗೆ ಟೆಂಟ್ ಶಾಲೆಗಳನ್ನು ತೆರೆಯಲಾಗಿದೆ.

ಸಂಖ್ಯೆ : ಇಡಿ 80 ಎಂಸಿಡಿ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

132 ಶ್ರೀ ಬಾಲಕೃಷ್ಣ ಹೆಚ್.ಸಿ (ಮಾಗಡಿ)

ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು

ಅ) ರಾಜ್ಯದಲ್ಲಿ ವಿತರಿಸುತ್ತಿರುವ ವಿವಿಧ ರೀತಿಯ ಪಡಿತರ ಚೀಟಿಗಳ ವಿವರ ನೀಡುವುದು;

ಪ್ರತಿಯೊಂದು ವಿಧಧ ಪಡಿತರ ಚೀಟಿ ವಿತರಣೆಗೆ ಸರ್ಕಾರ ಗೊತ್ತುಪಡಿಸಿರುವ ಮಾನದಂಡವೇನು;

ರಾಜ್ಯದಲ್ಲಿ ವಿತರಿಸಿರುವ ಪಡಿತರ ಚೀಟಿಗಳ ವಿವರ ಕೆಳಕಂಡಂತಿದೆ:-

ಅಂತ್ಯೋದಯ ಅನ್ನ ಯೋಜನೆ	–	1199700
ಅಕ್ಷಯ (ಬಿಪಿಎಲ್)	–	6633103
ಎಪಿಎಲ್	–	5317081
	ಒಟ್ಟು	1,31,49,884

ವರ್ಗವಾರು ಪಡಿತರ ಚೀಟಿಗೆ ಸರ್ಕಾರ ನಿಗಧಿಪಡಿಸಿರುವ ಮಾನದಂಡಗಳು ಕೆಳಕಂಡಂತಿರುತ್ತವೆ:-

(i) <u>ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿ:-</u>

ಮೂಲ ಬುಡಕಟ್ಟು (Primitive tribe) ಕುಟುಂಬಗಳು. ಬಡವರಲ್ಲಿ ಕಡುಬಡವರು, ಕುಟುಂಬಗಳಿಲ್ಲದ ಜೀವನ ನಿರ್ವಹಣೆಗೆ ನಿಶ್ಚಿತ ಆದಾಯ ಹಾಗೂ ಸಾಮಾಜಿಕ ನರೆವಿಲ್ಲದ 60 ಅಥವಾ 60 ವರ್ಷಕ್ಕಿಂತ ಮೇಲ್ಪಟ್ಟ ಏಕ ಪುರುಷ ಹಾಗೂ ಏಕ ಮಹಿಳೆ, ವಿಧವೆ, ಅನಾರೋಗ್ಯ ಪೀಡಿತ ಕುಟುಂಬಗಳು.